KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE.CHIKMAGALUR**
**AT Chikmagalur,CHIKMAGALUR**
**(Presided Over by SHUBHA GOWDAR)**
**SC/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

---

State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

---

Offence punishable under : SEC.314. of INDIAN PENAL CODE,

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**S.C. No: 02/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಡಾಃ ಶಿವಕುಮಾರ್ | ಪ್ರಾ.ಸಾ.- 08 |
| ತಂದೆಯ ಹೆಸರು | ಃ | ಕೆ. ಲಿಂಗರಾಜು | ಚಾ.ಸಾ.- 15 |
| ವಯಸ್ಸು | ಃ | 42 ವರ್ಷ | |
| ಉದ್ಯೋಗ | ಃ | ಶಸ್ತ್ರ ಚಿಕಿತ್ಸಕರು,ಸಾರ್ವಜನಿಕ ಆಸ್ಪತ್ರೆ, ಕೊಪ್ಪ | |
| ವಾಸ ಸ್ಥಳ | ಃ | ಕೊಪ್ಪ | |

**ದಿನಾಂಕಃ 23-11-2022**

**ಪ್ರಮಾಣ ವಚನ ಬೋಧಿಸಲಾಯಿತು.**

**ಃ ಮುಖ್ಯ ವಿಚಾರಣೆಃ ಮಾನ್ಯ ಪಿ.ಪಿ. ಯವರಿಂದಃ**

1. ಕಳೆದ 4 ವರ್ಷಗಳಿಂದ ನಾನು ಕೊಪ್ಪದ ಸಾರ್ವಜನಿಕ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸಕ ಎಂದು ಕೆಲಸ ಮಾಡುತ್ತಿದ್ದೇನೆ.

2. ದಿನಾಂಕಃ 14-02-2019 ರಂದು ನಾನು ರಾತ್ರಿ 11.30 ಗಂಟೆಗೆ ಕರ್ತವ್ಯದ ಮೇಲೆ ಇದ್ದಾಗ ಕುಃ ನಾಗರತ್ನ, 19 ವರ್ಷ ಇವರು ಹೊಟ್ಟೆ ನೋವು ಮತ್ತು ವಾಂತಿ ಎಂದು ನಮ್ಮ ಆಸ್ಪತ್ರೆಗೆ ಬಂದರು. ಅವರು ಹೇಳಿರುವ ಪ್ರಕಾರ ಅದೇ ದಿನ ಬೆಳಿಗ್ಗೆ ನಮ್ಮ ಆಸ್ಪತ್ರೆಗೆ ಬೇರೆ ವೈದ್ಯರ ಬಳಿಗೆ ಬಂದು ಪರೀಕ್ಷಿಸಿಕೊಂಡು drips ಹಾಕಿಸಿಕೊಂಡು ಮನೆಗೆ ಹೋಗಿದ್ದೆವೆಂದು ಹೇಳಿದರು, ನೋವು ಕಡಿಮೆ ಆಗಿಲ್ಲವೆಂದು ಪುನಃ ಅದೇ ದಿನ ರಾತ್ರಿ ಮೇಲೆ ಹೇಳಿದಂತೆ ಆಸ್ಪತ್ರೆಗೆ ಬಂದರು.

3. ಆಕೆಯನ್ನು ಪರೀಕ್ಷಿಸಲಾಗಿ ಬಿಪಿ 80/60 ಇದ್ದು, ಆ ಹುಡುಗಿ ಶಾಕ್ ನಲ್ಲಿ ಇದ್ದಳು. ನಾನು ಪರೀಕ್ಷೆ ಮಾಡಿದಾಗ ಆ ಹುಡುಗಿ ಗರ್ಭಿಣಿ ಆಗಿರಬಹುದು ಎಂದು ಅನುಮಾನ ಬಂದು ಮೂತ್ರ ಪರೀಕ್ಷೆಯನ್ನು ಮಾಡಿಸಲಾಯಿತು, ಅದರ ಪ್ರಕಾರ ಆ ಹುಡುಗಿ ಗರ್ಭಿಣಿ ಎಂದು ಕಂಡು ಬಂದಿತು. ಗರ್ಭಿಣಿಯರಲ್ಲಿ ಟ್ಯೂಬಲ್ ಪ್ರೆಗ್ನೆನ್ಸಿ ಎಂದು ಇರುತ್ತದೆ, ಆ ರೀತಿ ಏನಾದರೂ ಇದ್ದಲ್ಲಿ ಗರ್ಭಿಣಿಯರು ಶಾಕ್ ನಲ್ಲಿ ಇರುತ್ತಾರೆ, ಕಾರಣ ಅದರ ಬಗ್ಗೆ ಹೌದೋ ಅಲ್ಲವೋ ಎಂದು ಕಂಡು ಹಿಡಿಯಲು ದೂರವಾಣಿ ಮೂಲಕ ಪ್ರಾಸಾ-7 -ಡಾಃ ಉದಯಶಂಕರ್ ಇವರಿಗೆ ಸ್ಕ್ಯಾನಿಂಗ್ ಮಾಡಬೇಕೆಂದು ಕೇಳಿಕೊಂಡೆನು. ಈ ಬಗ್ಗೆ reference letter ನ್ನು ಅದೇ ದಿನ ರಾತ್ರಿ ಕಳುಹಿಸಿಕೊಟ್ಟೆನು, ಅದು ಇದೇ ಇರುತ್ತದೆ ಎಂದು ಸಾಕ್ಷಿದಾರರು ನಿ.ಪಿ. 10 ನ್ನು ನೋಡಿ ಗುರುತಿಸಿರುತ್ತಾರೆ, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ. 10(ಎ) ಎಂದು ಗುರುತಿಸಲಾಯಿತು.

4. ರಾತ್ರಿಯೇ 12.30 ಗಂಟೆಗೆ ಅಂದರೆ ದಿನಾಂಕಃ 15-02-2019 ರ ರಾತ್ರಿ, ಸ್ಕ್ಯಾನಿಂಗ್ ರಿಪೋರ್ಟಿನೊಂದಿಗೆ ವಾಪಾಸು ಬಂದರು, ಆ ಸ್ಕ್ಯಾನಿಂಗ್ ರಿಪೋರ್ಟ್ ಪ್ರಕಾರ 15 ವಾರಗಳ ಗರ್ಭಿಣಿ ಎಂದು ಇತ್ತು. ಅದರ ಪ್ರಕಾರ ನಾನು observation

ನಲ್ಲಿ ಆ ಹುಡುಗಿಯನ್ನು ಇಟ್ಟು ಸ್ತ್ರೀರೋಗ ತಜ್ಞರಿಗೆ refer ಮಾಡಿದೆನು.

**<u>ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಐ.ಎಸ್.ಟಿ. ವಕೀಲರಿಂದಃ</u>**

5. ನಾಗರತ್ನ ಅವರು ನಮ್ಮ ಆಸ್ಪತ್ರೆಗೆ ಬಂದಾಗ history ಬಗ್ಗೆ ಏನೂ ಹೇಳಲಿಲ್ಲ, ಬೆಳಿಗ್ಗೆ ಬಂದು drips ಹಾಕಿಸಿಕೊಂಡ ಬಗ್ಗೆ ಮಾತ್ರ ಹೇಳಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನೇನು ಪಡೆದಿಲ್ಲ. ನ್ಯಾಯಾಲಯದ ಮುಂದೆ ಮಾತ್ರ ಹೇಳುತ್ತಿದ್ದೇನೆ, ಬೇರೆಡೆ ಹೇಳಿಕೆಯನ್ನೇನು ಕೊಟ್ಟಿಲ್ಲ.

6. Early pregnancy ಯಲ್ಲಿ vomiting ಮತ್ತು ಹೊಟ್ಟೆನೋವು ಸಾಮಾನ್ಯವಾಗಿ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು vomiting ಇರುತ್ತದೆ, ಆದರೆ ಎಲ್ಲಾ ಕೇಸುಗಳಲ್ಲೂ ಹೊಟ್ಟೆ ನೋವು ಇರುವುದಿಲ್ಲ ಎಂದು ಹೇಳಿರುತ್ತಾರೆ.

7. ತಾವು abnormalities ಯನ್ನೇನು ಕಾಣಲಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಶಾಕ್ ನಲ್ಲಿ ಇದ್ದಳು ಎಂದರೆ ಬಿಪಿ low ಇರುತ್ತದೆ, ಗಾಬರಿ ಇರುತ್ತದೆ, ಈ ಕಾರಣದಿಂದ ಶಾಕ್ ನಲ್ಲಿ ಇದ್ದಳು ಎಂದು ಎಂದು ಹೇಳಿರುತ್ತೇನೆ, ಇದು ಬಿಟ್ಟರೆ ಬೇರೆ abnormalities ಇರಲಿಲ್ಲ ಎಂದು ಹೇಳಿರುತ್ತಾರೆ.

8. ಗರ್ಭಿಣಿ ಸ್ತ್ರೀಯರಲ್ಲಿ ಬಿಪಿ ವ್ಯತ್ಯಾಸ ಆಗುವುದು ಸಾಮಾನ್ಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಎಲ್ಲಾ ಕೇಸುಗಳಲ್ಲೂ ಈ ರೀತಿ ಆಗುವುದಿಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
**ಓ.ಹೇ.ಕೇ.ಸ.ಇ.ಎ.ಒ.**

**Sd/-23-11-2022**
**(ಶುಭ ಗೌಡರ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ಸಾಕ್ಷಿ ಸಹಿಃ-

Visit **ecourts.gov.in** for updates or download mobile app “**eCourts Services**” from Android or iOS